ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ಶ್ರೀ ಮರಿತಿಬ್ಬೇಗೌಡ, ಶ್ರೀ ಕೆ.ಟಿ. ಶ್ರೀಕಂಠೇಗೌಡ, ಡಾ:ವೈ.ಎ. ನಾರಾಯಣಸ್ವಾಮಿ, ಶ್ರೀ ಆಯನೂರು ಮಂಜುನಾಥ, ಶ್ರೀ ಅರುಣ ಶಹಾಪುರ ಶ್ರೀ ಎಸ್. ಎಲ್. ಭೋಜೇಗೌಡ, ಶ್ರೀ ನಿರಾಣಿ ಹಣಮಂತ ರುದ್ರಪ್ಪ ಹಾಗೂ ಡಾ. ಚಂದ್ರಶೇಖರ ಬ. ಪಾಟೀಲ್ ಇವರುಗಳಿಂದ ನಿಯಮ 72ರ ಅಡಿಯಲ್ಲಿ ಜೆ.ಒ.ಸಿ. (ಶಿಕ್ಷಕರ) ವಿಧೇಯಕ ತಿದ್ದುಪಡಿಯಾದ ನಂತರ ವಂಚಿತರಾದ 530 ಭೋದಕ ಹಾಗೂ ಭೋದಕೇತರರಿಗೆ ನ್ಯಾಯ ಒದಗಿಸುವ ಕುರಿತು ಗಮನ ಸೆಳೆಯುವ ಸೂಚನೆ.

**ಹೇಳಿಕೆ:-**

ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವ ವಿಲೀನ ವಿಧೇಯಕದ ಅಧಿಸೂಚನೆ ಸಂಖ್ಯೆ ಸಂವ್ಯಶಾಇ22: ಶಾಸನ2011: ದಿನಾಂಕ:06.04.2011 ರನ್ವಯ, ಸದರಿ ನಿಯಮದ ನಿಯಮ 3 (ಎ) ರಲ್ಲಿ ಯಾವೊಬ್ಬ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನನ್ನು ಆತನಿಗೆ ನೇರವಾಗಿ ಅನ್ವಯಿಸಬಹುದಾದಂತಹ ಕಾರಣಗಳಿಗಾಗಿ ಆತನು ಯಾವುದೇ ಸೇವಾ ಭಂಗವಿಲ್ಲದೇ ಐದು ವರ್ಷಗಳಿಗೆ ಕಡಿಮೆ ಇಲ್ಲದಂತೆ ನಿರಂತರವಾಗಿ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನಾಗಿ ಕರ್ತವ್ಯವನ್ನು ನಿರ್ವಹಿಸಿದ್ದ ಹೊರತು, ವಿಲೀನಗೊಳಿಸತಕ್ಕದ್ದಲ್ಲವೆಂಬ ಷರತ್ತನ್ನು ವಿಧಿಸಲಾಗಿರುತ್ತದೆ. ಅದರಂತೆ, ನಿರಂತರವಾಗಿ 05 ವರ್ಷ ಸೇವೆ ಪೂರೈಸಿರುವ ಒಟ್ಟು 2931 (ಸರ್ಕಾರಿ 1263 ಮತ್ತು ಅನುದಾನಿತ 1668) ವೃತ್ತಿ ಶಿಕ್ಷಣ ಸಿಬ್ಬಂದಿಯವರನ್ನು ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ವಿಲೀನಗೊಳಿಸಲಾಗಿದೆ.

ಸರ್ಕಾರದ ಅಧಿಸೂಚನೆ ದಿನಾಂಕ: 06.04.2011ಕ್ಕೆ ಐದು ವರ್ಷಗಳಿಗಿಂತ ಕಡಿಮೆ ಸೇವೆಯನ್ನು ಸಲ್ಲಿಸಿರುವ 530 ಭೋದಕ ಹಾಗೂ ಭೋದಕೇತರರುಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡಲಾಗಿರುವುದರಿಂದ, ವಿಲೀನಕ್ಕೆ ಪರಿಗಣಿಸಲು ನಿಯಮಗಳಲ್ಲಿ ಆಸ್ಪದವಿರುವುದಿಲ್ಲ.

**ಸಂಖ್ಯೆ: ಇಪಿ 27 ಟಿವಿಇ 2020**

**(ಎಸ್.ಸುರೇಶ್ ಕುಮಾರ್)**
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು